

# ಪ್ರಾಪ್ತಿ

ಬಹುಕಾಲದ ಹಿಂದೆ ಅಗ್ರಹಾರ ಎಂಬ ಊರಿನಲ್ಲಿ ರಾಮದೇವ ಮತ್ತು ಸೀತಮ್ಮ ಎಂಬ ಬಡ ದಂಪತಿ ಇದ್ದರು. ಒಂದು ಹೊತ್ತಿಗೂ ಊಟಕ್ಕಿಲ್ಲದೆ ಭಿಕ್ಷೆ ಬೇಡಿ ತಂದು ತಿನ್ನುವುದು, ಊರ ಹೊರಗಿನ ದೇವಾಲಯದಲ್ಲಿ ಮಲಗುವುದು ಮಾಡುತ್ತಿದ್ದರು. ಬೆಳಿಗ್ಗೆ ಸೀತಮ್ಮ ದೇವಾಲಯವನ್ನು ಸಾರಿಸಿ ರಂಗವಲ್ಲಿ ಹಾಕಿದರೆ, ರಾಮದೇವ ದೇವರ ಪೂಜೆ ಮಾಡುತ್ತಿದ್ದನು. ಭಕ್ತರು ಏನನ್ನಾದರೂ ನೀಡಿದರೆ ಉಂಟು. ಇಲ್ಲವಾದರೆ ಭಿಕ್ಷಾಟನೆಯೇ ಗತಿ. ಪ್ರತಿ ದಿನ ಮಲಗುವಾಗ 'ದೇವರೇ ನಿನ್ನ ಸೇವೆ ನಿತ್ಯ ಮಾಡ್ತಾ ಇದ್ದೇವೆ. ನಮ್ಮ ಎರಡು ಹೊತ್ತಿನ ಊಟಕ್ಕಾದರೂ ವ್ಯವಸ್ಥೆ ಮಾಡಪ್ಪ' ಎಂದು ಬೇಡಿಕೊಳ್ಳುತ್ತಿದ್ದರು.

ಒಂದು ದಿನ ದೇವರು ಕನಸಿನಲ್ಲಿ ಬಂದು 'ರಾಮದೇವ ನಿನ್ನ ಸೇವೆಗೆ ಮೆಚ್ಚಿದೆ. ನಾಳೆ ಬೆಳಿಗ್ಗೆ ನೀನು ಪೂಜೆ ಮಾಡುವ ವೇಳೆಗೆ ನಾನು ಹೊರಗಿನಿಂದ ಬರುತ್ತೇನೆ. ನನ್ನನ್ನು ಪಡೆದು ಸುಖದಿಂದಿರಿ' ಎಂದನು. ರಾಮದೇವ ಹೆಂಡತಿಯನ್ನು ಎಬ್ಬಿಸಿ ಕನಸಿನ ವಿವರ ನೀಡಿದ. ಆಕೆಯೂ ಕೂಡ 'ನನಗೂ ಅದೇ ಕನಸು ಬಂದಿದೆ ನನ್ನೊಡೆಯ' ಎಂದು ಹೇಳಿದಳು.

ಬೆಳಿಗ್ಗೆ ಬೇಗನೆ ಎದ್ದು ದೇವಾಲಯ ಸ್ವಚ್ಛಗೊಳಿಸಿ ಸ್ನಾನ ಮುಗಿಸಿದಳು. ರಾಮದೇವ ಶುಚಿಯಾಗಿ ಹೊತ್ತು ಏರುವ ವೇಳೆಗೆ ಪೂಜೆ ಮುಗಿಸಿದನು. ಇಬ್ಬರೂ ಕಾಯುತ್ತ ಕುಳಿತರು. ಮಹಾದ್ವಾರದಿಂದ ಒಂದು ಭಾರಿ ಹಾವು ಗರ್ಭಗುಡಿಯ ಬಳಿಗೆ ಬರುತ್ತಿತ್ತು. ಸೀತಮ್ಮ ಹೇಳಿದಳು. 'ಹಿಡಿಯಿರಿ ಅದೇ ನಮ್ಮ ದೇವರು' ಎಂದಳು.. ರಾಮದೇವನಿಗೆ ಭಯವಾಯಿತು. ಆ ವೇಳೆಗೆ ಹಾವು ಗರ್ಭಗುಡಿಯ ಬಿಲದೊಳಗೆ ಸೇರತೊಡಗಿತು. ಸೀತಮ್ಮ ಧೈರ್ಯ ಮಾಡಿ ಎರಡೂ ಕೈಗಳಿಂದ ಬಾಲವನ್ನು ಹಿಡಿದೇಬಿಟ್ಟಳು. ನೋಡುತ್ತಾಳೆ. ಎರಡು ಕೈತುಂಬಾ ಬಂಗಾರ. ದಂಪತಿ 'ಅಯ್ಯೋ ಇಷ್ಟೇ ನಮ್ಮ ಪ್ರಾಪ್ತಿ' ಎಂದರು.

**-ವಿ.ಸತ್ಯನಾರಾಯಣರಾವ್, ಯಲಹಂಕ**



# ಕನ್ನಡದ ನಾಡು

ನಮ್ಮಯ ನಾಡು ಕನ್ನಡನಾಡು
ಕನ್ನಡಿಗರ ನೆಚ್ಚಿನ ನೆಲೆಬೀಡು

ಹೊಂದಿದೆ ಹಚ್ಚನೆ ಹಸಿರಿನ ಕಾಡು
ಹೊಮ್ಮಿದೆ ಹಕ್ಕಿಯ ಇಂಪಿನ ಹಾಡು
ರಾಗಿಯ ಭತ್ತದ ಪೈರಿನ ನಾಡು
ತೂಗಿ ಬಾಗುವ ತೆನೆಗಳ ಹಾಡು

ಸಾಧು ಸಂತರು ಜನಿಸಿದ ನಾಡು
ವೀರ ಶೂರರು ಆಳಿದ ನಾಡು
ಕವಿ ಪುಂಗವರು ಹುಟ್ಟಿದ ಬೀಡು

ಕನಕ ದೇಗುಲಗಳ ಹೊನ್ನಾಡು
ಜಾತಿ ಭೇದವ ತೊರೆದಿಹ ನಾಡು
ನೀತಿ ನಿಯಮವ ಸಾರುವ ಬೀಡು
ಸ್ವಾಭಿಮಾನದಿ ಮೆರೆದಿಹ ನಾಡು
ದುರಭಿಮಾನವ ಮೆಟ್ಟಿದ ಬೀಡು

ಗಂಗೆ ತುಂಗೆಯರು ನದಿಗಳು ಜೋಡು
ಹರಿದಿಹ ಪುಣ್ಯ ಭೂಮಿಯ ನೋಡು
ಯಂತ್ರ – ತಂತ್ರಗಳ ಮೋಡಿಯ ನೋಡು
ಕನ್ನಡ ಮಾತೆಗೆ ನಮನವ ಮಾಡು

**-ಜಯಲಕ್ಷ್ಮಿ, ವಿಟ್ಲ**